ಅತ್ತೆ ಮಾವನ ಕೈಕೆಳಗಿರುವ ಸಂಸಾರಕ್ಕಿಂತ ಪೇಟೆ ಮೇಲಿನ ಬದುಕು ಬಹಳ ಒಳ್ಳೆಯದಲ್ಲವೇ? ಯಾರದ್ದೂ ಹಂಗಿರದ ಬದುಕು ಎಂಬ ಊಹೆ ಶಂಬಣ್ಣನದು...

ಮದರಂಗಿ ಬಳಿಸಿಕೊಳ್ಳುತ್ತ ಶಾರಿ ಕುಳಿತಿದ್ದರೆ, ಬಾಗಿಲ ಹಿಂಬಯಲ್ಲೆಲ್ಲೋ ಅಡಗಿ ನಿಂತಿದ್ದೇನೆ ಎಂಬ ಭ್ರಮೆಯಲ್ಲಿ ತಾರತ್ತೆ ಪಿಸುಗುಡುತ್ತಿದ್ದ ದನಿ.

ಒಳ್ಳೆಯವರು ಅಂತ ತೋರಿಸಿಕೊಳ್ಳುವವರ ಕತೆಯೇ ಇಷ್ಟು. ಪರರ ನೋವಿಗೆ ನೊಂದವರಂತೆ ಕಣ್ಣೀರುಗರೆದು ಹಿಂದಾಗಡೆಯಿಂದ ನಕ್ಕು ಹಗುರಾಗುತ್ತಾರೆ. ಮನುಷ್ಯರು ಎಂದ ಮೇಲೆ ಕೋಪ ತಾಪದ ಜೊತೆ ಮಾತ್ಸರ್ಯ, ದ್ವೇಷವೂ ಇರುತ್ತದೆಯಲ್ಲ. ಅದು ಒಂದಿಲ್ಲೊಂದು ರೂಪದಲ್ಲಿ ಯಾವತ್ತಾದರೊಂದು ದಿನ ಹೊರಬರಲೇಬೇಕು. ಎದುರಿಗಿನ ವ್ಯಕ್ತಿ ಮತ್ತು ವಿಷಯ ಬದಲಾಗಬಹುದು. ಆದರೆ ನಮ್ಮೊಳಗಿನ ಭಾವನೆ ಅದೇ ಆಗಿರುತ್ತದೆ; ಒಮ್ಮೆ ದ್ವೇಷ, ಒಮ್ಮೆ ಅಸೂಯೆ ಅಷ್ಟೇ!

'ನೋಡಿದ್ಯಾ ಏನಾಯ್ತು ಅಂತ. ಸೋದರದಲ್ಲೇ ಮಾಡಿಸಿಕೊಳ್ಳಿ ಶಾರಿಗೆ, ಕಣ್ಣೆದುರಿಗೇ ಇರ್ತಾಳೆ' ಎಂದು ಸಾರಿಸಾರಿ ಎಷ್ಟು ಅಲವತ್ತುಕೊಂಡಿರಲಿಲ್ಲ ನಾನು. ನನ್ನ ಚಿನ್ನದಂತಹ ಮಗ ಮನೇಲಿದ್ದರೇನಾಯ್ತು, ಜಮೀನು, ಕೈಕಾಲಿಗೆ ಆಳುಕಾಳುಗಳಿರಲಿಲ್ಲವೇ? ಗುಟಕಾ ಹಾಕಿ ಅಂಗಳದ ತುದಿಗೆ ಪಿಚಕಿ ಹಾಕುತ್ತ, ಊರ ಮೇಲಿನ ಸಮಾರಾಧನೆಗೆ ಬಡಿಸಲು ತಿರುಗುವ ಗಂಡು ನಮ್ಮ ಶಾರಿಗಲ್ಲ ಅಂತ ಕಡ್ಡಿ ಮುರಿದಂತಾಡಿದ್ದ ಶಂಬಣ್ಣ. ಶಾರಿಯ ಎರಡನೇಯ ಮದುವೆ ನೋಡು ಹೇಗೆ ಮನೆಯಲ್ಲಿದ್ದವನಿಗೇ ಆಯ್ತು. 'ನಮ್ಮನೆಯ ಸಮಾರಾಧನೆಗೆ ಸುಧಾಕರನೂ ಬಡಿಸಲು ಬರುತ್ತಾನೆ ಗೊತ್ತುಂಟೊ' ಎಂದು ತಾರತ್ತೆ ಕಿವಿಯಿರದ ಗೋಡೆಗಾತು ತನಗೆ ಮಾಡಿದ ಅಪಮಾನಕ್ಕೆ ಶಾರಿಯ ಬದುಕು ಹೀಗಾಯಿತೆಂಬಂತೆ ಹಲಬುತ್ತಿದ್ದಳು. ಬಹುಶಃ ನೆಂಟರು ಅಂತ ಬಂದವರ ಬಳಿಯೆಲ್ಲ ಹಪಿಸಿಕೊಂಡು ಹೇಳುತ್ತಿದ್ದ ತಾರತ್ತೆಯದು ಶಂಬಣ್ಣ–ಶಾರಿಯ ಎದುರು ತನ್ನ ಅಪಮಾನವನ್ನು ಜರೆಯಲಾಗದಿದ್ದರ ಸಂಕಟವೋ ಅಥವಾ ಅವರು ಪಡುತ್ತಿದ್ದ ಸಂಕಟಕ್ಕೆ ಸಂಭ್ರಮವೋ! ಹಿಂದೆ ಆಡಿಕೊಂಬುವವರ ಮುಖಭಾವ ಯಾರಿಗೆ ಗೊತ್ತು.

'ಹೆಣ್ಮಕ್ಕಳ ಮುಖಕ್ಕೆ ಕರಡ ಕಟ್ಟ, ಮನೆಯಲ್ಲಿರುವ ಗಂಡುಗಳೇನು ಗಂಡಸರಂತೆ ಕಾಣೊಲ್ಲವೆ ಬೆಳೆದ ಈ ಹೆಣ್ಣುಮಕ್ಕಳಿಗೆ' ಎಂದು ಮನೆಯಲ್ಲಿರುವ ಗಂಡಿಗೆ ಹೆಣ್ಣೇ ಸಿಗದು ಎಂದು ಅರಚಾಡುವ ತಾರತ್ತಿಗೆ ಮಾತ್ರ ತನ್ನ ಮಗಳನ್ನು ಸೋಮನಮನೆಯ ಮೂಲದ ಅಮೆರಿಕದ ಯಾವುದೋ ಜಾಗದಲ್ಲಿರುವ ಗಂಡಿಗೆ ಕೊಟ್ಟು ಮದುವೆ ಮಾಡಿದ್ದಳು. ತಾರತ್ತಿಗೆಯಂಥವರ ಆದರ್ಶದ ಪಾಠ ಬೇರೆಯವರಿಗೆ ಮಾತ್ರ ಎಂಬುದೂ ಗೊತ್ತು. ಶಾರಿಗೆ ಇಂತಹ ಮಾತುಗಳಿಂದ ತಾನು ದೂರವಿದ್ದಷ್ಟೂ ಒಳ್ಳೆಯದು ಎನ್ನಿಸಿದರೂ ತಾನಾಗಿಯೇ ತೊಡರಿಕೊಳ್ಳುವವರಿಗೇನು ಹೇಳುವುದು ಎಂದು ಮತ್ತೂ ಮಗುಮ್ಮಾಗಿಬಿಟ್ಟಳು.

ಕಾರ್ತೀಕ ಹುಟ್ಟಿ ಎರಡು ತಿಂಗಳಾಗಿರಬೇಕು, ಬಾಣಂತನದ ನೋವು ಸ್ವಲ್ಪವೇ ಮರೆಯಾಗುತ್ತ ಹಾಕಿದ ಹೊಲಿಗೆಯ ನೋವನ್ನೂ ಹೊರತುಪಡಿಸಿ ಶಾರಿಯ ತಲೆಯಲ್ಲಿ ಬೇರೆಯ ವಿಚಾರವೂ ಹಾದುಹೋಗತೊಡಗಿದ ಕಾಲವೆನ್ನಿ. ಸೀರೆಯನ್ನು ಪಟ್ಟಿಮಾಡಿ ಸೊಂಟಕ್ಕೆ ಸುತ್ತಿ, ಅಮ್ಮನ ಮದ್ದು ಮೆಣಸು, ಜೀರಿಗೆ ಕುಡಿದು ದಿನಕ್ಕೆ ನಾಲ್ಕು ಬಾರಿ ಹೊಟ್ಟೆ ಕರಗಿತಾ, ನೆರಿಗೆ ಹೋಯಿತಾ ಎಂದು ಎಂದು ಪದೇ ಪದೆ ನೋಡತೊಡಗಿದ್ದಳು ಶಾರಿ.

ನಾಲ್ಕೂವರೆ ಕೇಜಿ ತೂಗುವ ಕಾರ್ತೀಕನಿದ್ದ ಹೊಟ್ಟೆ ಎಷ್ಟು ದೊಡ್ಡದಾಗಿರಬಹುದು! ಒಂದೆರಡು ತಿಂಗಳು ಕಳೆಯುವುದರೊಳಗೆ ಹೊಟ್ಟೆ ಕರಗಿ ಸಪಾಟಾಗಲು ಸಾಧ್ಯವೇ? ಒಂದು